ಪ್ರಕಟಣೆ

ಅಧ್ಯಕ್ಷರು.—ಪ್ರಕಟಣೆಗಳು.

ದಿನಾಂಕ ೩ನೇ ಮಾರ್ಚ್, ೧೯೮೭ ರಂದು ವಿಧಾನ ಸಭೆಯು ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.—

ದಿನಾಂಕ ೭ನೇ ಮಾರ್ಚ್, ೧೯೮೭ ರಿಂದ ೨೫ನೇ ಮಾರ್ಚ್ ೧೯೮೭ ರವರೆಗೆ ಇಲಾಖಾವಾರು ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಸುವುದು ಹಾಗೂ ಮತಕ್ಕೆ ಹಾಕುವುದು, ೨೬ನೇ ಮಾರ್ಚ್ ೧೯೮೭ರಂದು ಸಭೆಯು ಬೆಳಗ್ಗೆ ೯ ಗಂಟೆಗೆ ಸೇರುವುದು ಹಾಗೂ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆಯನ್ನು ನಡೆಸುವುದು ಹಾಗೂ ಮತಕ್ಕೆ ಹಾಕುವುದು, ಪುನಃ ೩-೦೦ ಗಂಟೆಗೆ ಸಮಾವೇಶಗೊಂಡು ಧನ ವಿನಿಯೋಗ ವಿಧೇಯಕವನ್ನು ಪರಿಶೀಲನೆ ಮಾಡಿ ಅಂಗೀಕರಿಸುವುದು.

ದಿನಾಂಕ ೧೬ನೇ ಮಾರ್ಚ್ ೧೯೮೭ರಂದು ೧೯೮೭-೮೭ನೇ ಸಾಲಿನ ಅನುಪೂರಕ ಅಂದಾಜುಗಳನ್ನು ಸಭೆಯಲ್ಲಿ ಮಂಡಿಸಲಾಗುವುದು. ಹಾಗೂ ಅದರ ಬಗ್ಗೆ ಚರ್ಚೆ ಹಾಗೂ ಮತದಾನವನ್ನು ದಿನಾಂಕ ೧೭ನೇ ಮಾರ್ಚ್ ೧೯೮೭ರಂದು ನಡೆಸಲಾಗುವುದು.

ದಿನಾಂಕ ೨೭ನೇ ಮಾರ್ಚ್, ೧೯೮೭ ರಂದು ಸಭೆಯು ತೆರಿಗೆಗಳಿಗೆ ಸಂಬಂಧಿಸಿದ ವಿಧೇಯಕಗಳನ್ನು ಪರಿಶೀಲಿಸುವುದು.

ದಿನಾಂಕ ೩೧ನೇ ಮಾರ್ಚ್, ೧೯೮೭ರಂದು ಮತ್ತು ೧ನೇ ಏಪ್ರಿಲ್, ೧೯೮೭ರಿಂದ ೩ನೇ ಏಪ್ರಿಲ್ ೧೯೮೭ ರವರೆಗೆ ಶಾಸನ ರಚನೆ ಹಾಗೂ ಇತರ ಕಲಾಪಗಳನ್ನು ನಡೆಸಲಾಗುವುದು. ದಿನಾಂಕ ೪ನೇ ಹಾಗೂ ೫ನೇ ಏಪ್ರಿಲ್ ೧೯೮೭ ರಂದು ಶಾಸಕರ ದಿನಾಚರಣೆಯನ್ನು ಆಚರಿಸಲಾಗುವುದು.

ವಿಧಾನ ಸಭೆಯ ಮಾನ್ಯ ಸದಸ್ಯರಿಗೆ ಸಭಾಧ್ಯಕ್ಷರ ಬಹುಮಾನ ಹಾಗೂ ಪ್ರಶಸ್ತಿ ಪತ್ರ

(ಈ ಕೆಳಕಂಡ ವಿಭಾಗದಲ್ಲಿ ಪರಿಣಿತರಾದವರಿಗೆ ಸಭಾಧ್ಯಕ್ಷರ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಗುವುದು):

೧ ತಪ್ಪದೆ ಉಪವೇಶನಗಳಿಗೆ ಹಾಜರಾಗಿ ಸಭೆಯಲ್ಲಿ ಹೆಚ್ಚು ವೇಳೆ ಇದ್ದ ಸದಸ್ಯರು.

೨ ಆಳವಾಗಿ ಅಭ್ಯಾಸ ಮಾಡಿ ಸರಳ ಸುಂದರವಾದ ಶೈಲಿಯಲ್ಲಿ ವಿಷಯಾಂತರ ಮಾಡದೆ ವಿಷಯದ ಬಗ್ಗೆ ಮನ ಮುಟ್ಟುವಂತೆ ಮಾತನಾಡಿದವರು.

೩ ಶಿಸ್ತು ಸಂಯಮದಿಂದ. ಉತ್ತಮ ವರ್ತನೆಯಿಂದ ನಿಯಮಗಳಿಗನುಸಾರವಾಗಿ ನಡೆದು ಕೊಂಡವರು.

೪. ತಮ್ಮ ಮತದಾರ ಕ್ಷೇತ್ರದ ಸಾರ್ವಜನಿಕ ಬೇಡಿಕೆಗಳ ಬಗ್ಗೆ ಪರಿಣಾಮಕಾರಿಯಾಗಿ ಸರ್ಕಾರದ ಗಮನ ಸೆಳೆದವರು.

ಈ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು ಮತ್ತು ಇತರ ಶಾಸಕಾಂಗ ರಾಜಕೀಯ ಪಕ್ಷದ ನಾಯಕರುಗಳು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಯವರೊಂದಿಗೆ ಸಮಾಲೋಚಿಸಿ ಕೊಡಲಾಗುವುದು.

ಈ ಪ್ರಶಸ್ತಿ ಪತ್ರವನ್ನು ''ಶಾಸಕರ ದಿನಾಚರಣೆ''ಯಂದು ನೀಡಲಾಗುವುದು. ಇಲ್ಲಿಗೆ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ ಪುನಃ ೧೦ ಗಂಟೆಗೆ ಸಮಾವೇಶಗೊಳ್ಳುವುದು.

ಸಭೆಯು 5 ಗಂಟೆ 49 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 5ನೇ ಮಾರ್ಚ್ 1987 ಗುರುವಾರದಂದು 11 ಗಂಟೆಗೆ ಸೇರಲು ನಿಶ್ಚಯಿಸಲಾಯಿತು.